ಶ್ರೀ ಯು. ಎಂ. ಮಾದಪ್ಪ.—ಯಾವುದನ್ನು ಈಗ ತೀರ್ಮಾನಮಾಡಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಯಾವುದರ ವಿಷಯದಲ್ಲೂ ತೀರ್ಮಾನಕ್ಕೆ ಬಂದಿಲ್ಲ.

Silk yarn (Import and distribution to weavers).

Q.—543. Sri U. M. MADAPPA (Chamarajanagar).—

Will the Government be pleased to state :—

(*a*) the quantity of silk yarn imported into the State for the past three years ;

(*b*) the quantity supplied to the handloom and the powerloom weavers out of the above ;

(*c*) whether yarn has been supplied to the handloom weavers in rural parts.

(*d*) the number of handloom weavers for whom it is supplied ?

A.—Sri A. G. RAMACHANDRA RAO (Minister for Law and Education) [on behalf of SRI H. SIDDAVEERAPPA (Minister for Home)].—

(*a*) Information is available only in regard to imports made on Government account.

The Department of Sericulture has imported raw silk as follows :—

1952-53	... ...	Nil.
1953-54	... ...	9,387 lbs.
1954-55	... ...	19,862 lbs.

(*b*) The imported quantity of raw silk was distributed to the handloom and powerloom weavers as follows :—

	Handlooms	*Powerlooms*
	lbs.	lbs.
1952-53 ...	1,325	2,033
1953-54 ...	8,726	...
1954-55 ...	...	663

(*c*) Yes, through Handloom and Powerloom Co-operative Societies and Associations.

(*d*) About 1,215 through the Co-operative Society and Association.

ಶ್ರೀ ಯು. ಎಂ. ಮಾದಪ್ಪ.—ಖಾಸಗಿಯವರು ಇದನ್ನು ಮಾಡುತ್ತಿದ್ದಾರೆಯೇ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಯು. ಎಂ. ಮಾದಪ್ಪ.—1951ರಲ್ಲಿ ನಡೆದ ಸಿಲ್ಕ್ ಸೆಮಿನಾರ್‌ನಲ್ಲಿ ಸರ್ಕಾರದವರೇ ನೇರವಾಗಿ ಕೃತಕ ರೇಷ್ಮೆಯನ್ನು ಕೊಂಡುಕೊಂಡು ಹಂಚಬೇಕೆಂದು ಹೇಳಿರಲಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸೆಮಿನಾರ್ ಅವರು ಯಾವರೀತಿ ತೀರ್ಮಾನಮಾಡಿದ್ದಾರೋ ಅದೇ ರೀತಿ ಮಾಡುತ್ತಿದ್ದಾರೆ.

ಶ್ರೀ ಯು. ಎಂ. ಮಾದಪ್ಪ.—ಸರ್ಕಾರವೇ ನೇರವಾಗಿ ಅಮದುಮಾಡುವ ನೀತಿಯನ್ನು ಅನುಸರಿಸಿರುತ್ತಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರದವರು ಎಷ್ಟು ಸಹಾಯಮಾಡಬಹುದೋ ಅದನ್ನು ಮಾಡುತ್ತಾರೆ. ಅದನ್ನು ಬಿಟ್ಟು ಖಾಸಗಿಯವರಿಗೆ ಪ್ರತಿಬಂಧಕ ಹಾಕಿದರೆ ಅವರಿಗೆ ತೊಂದರೆಯಾಗುತ್ತದೆ.

ಶ್ರೀ ಯು. ಎಂ. ಮಾದಪ್ಪ.—ಸೆಮಿನಾರ್‌ನಲ್ಲಿ ಕೃತಕ ರೇಷ್ಮೆಯನ್ನು ಅಮದುಮಾಡುವಾಗ, ಸರ್ಕಾರಿಯಾಗಿ ಅಮದುಮಾಡಬೇಕೆಂದು ತೀರ್ಮಾನಮಾಡಿದ್ದರೂ ಅದರಂತೆ ಏಕೆ ಮಾಡಲಿಲ್ಲ.

ಶ್ರೀ ಎ. ಜಿ. ರಾಮಚಂದ್ರರಾವ್.—ಖಾಸಗಿ ಉದ್ಯಮದಲ್ಲಿರುವವರಿಗೆ ತೊಂದರೆಯಾಗುತ್ತದೆಂದು ಮಾಡಲಿಲ್ಲ !

ಶ್ರೀ ಯು. ಎಂ. ಮಾದಪ್ಪ.—ಮೈಸೂರು ಸಂಸ್ಥಾನದಲ್ಲಿ ರೇಷ್ಮೆ ಬೆಳೆಯತಕ್ಕವರಿಗೆ ನಿಮ್ಮ ನೀತಿಯಿಂದ ತೊಂದರೆಯಾಗುತ್ತದೆ ಎಂಬುದು ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬೆಳೆಯತಕ್ಕವರಲ್ಲೂ ಕೆಲವರಿಗೆ ತೊಂದರೆಯಾಗುತ್ತದೆ.

ಶ್ರೀ ಯು. ಎಂ. ಮಾದಪ್ಪ.—ಹಂಚಿಕೆ ಮಾಡುವಾಗ ಸರ್ಕಾರವೇ ನೇರವಾಗಿ ಮಾಡುವುದಕ್ಕೆ ಏರ್ಪಾಡು ಮಾಡುತ್ತಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಸೊಪ್ಪೆಟಿಗಳ ಮೂಲಕವಾದರೂ ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ಮಾಡುತ್ತಿರುವುದು ಸೊಪ್ಪೆಟಿಗಳ ಮೂಲಕವೇ.

ಶ್ರೀ ಯು. ಎಂ. ಮಾದಪ್ಪ.—ಸಂಸ್ಥಾನದಲ್ಲಿ ಬೆಳೆಯುವ ರೇಷ್ಮೆಯನ್ನೂ ಕೊಂಡುಕೊಂಡು, ಕೃತಕ ರೇಷ್ಮೆಯನ್ನೂ ತೆಗೆದುಕೊಂಡು, ಶೇಕಡ 25 ಕೃತಕ ರೇಷ್ಮೆ ತೆಗೆದುಕೊಂಡರೆ ಶೇಕಡ 75 ರಷ್ಟು ಸಂಸ್ಥಾನದ ರೇಷ್ಮೆಯನ್ನು ತೆಗೆದುಕೊಳ್ಳುವಂತೆ ಮಾಡುವುದಕ್ಕಾಗುತ್ತದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಯೋಚನೆ ಮಾಡುತ್ತೇವೆ.

ಶ್ರೀ ಜಿ. ನಾರಾಯಣಗೌಡ.—ನಮ್ಮ ದೇಶದಲ್ಲಿ ಆಗತಕ್ಕ ರೇಷ್ಮೆ ನಮ್ಮ ದೇಶಕ್ಕೆ ಸಾಕಾಗುವಷ್ಟಿಲ್ಲ ಅಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಕಾದಷ್ಟಿಲ್ಲ.

ಶ್ರೀ ಜಿ. ನಾರಾಯಣಗೌಡ.—ಈ ಬಗ್ಗೆ ಅಂಕೆ ಅಂಶಗಳು ತಮ್ಮಲ್ಲಿವೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸ್ಥೂಲವಾದ ಅಂಕಿಅಂಶಗಳು ನಮ್ಮಲ್ಲಿವೆ.

ಶ್ರೀ ಜಿ. ನಾರಾಯಣಗೌಡ.—ನಮ್ಮ ದೇಶದಲ್ಲಿ ಎಷ್ಟಾಗುತ್ತಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಖಾಸಗಿಯವರು ತರಿಸುವುದು ಎಷ್ಟು, ಸರ್ಕಾರದವರು ತರಿಸುವುದು ಎಷ್ಟು ಎಂದು ಗೊತ್ತುಮಾಡದೆ ತಾವೇ ವ್ಯಾಪಾರ ನಡೆಸಿದರೆ, ರೇಷ್ಮೆ ವ್ಯಾಪಾರ ಮಾಡುವವರಿಗೆ ಇದರಿಂದ ಬಹಳ ದುಷ್ಪರಿಣಾಮವಾಗುವುದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದರ Statistics ಶೇಖರಿಸುವುದು ಕಷ್ಟ. ಆದರೂ ತಕ್ಕಮಟ್ಟಿಗೆ ಮಾಡುತ್ತಿದ್ದೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಕೇಂದ್ರ ಸರ್ಕಾರದವರೇ ಇದನ್ನು ತರಿಸುತ್ತಿರುವುದರಿಂದ ಅವರಿಂದ ತೆಗೆದುಕೊಳ್ಳುವುದು ಸಾಧ್ಯವಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸೆಂಟ್ರಲ್ ಸಿಲ್ಕ್‌ಬೋರ್ಡಿನವರು ಇದನ್ನು ಮಾಡುತ್ತಾರೆ. ಅವರು ಒಂದು ನೀತಿಯನ್ನು lay down ಮಾಡಿ ಯಾವ ಯಾವ Stateಗೆ ಎಷ್ಟೆಷ್ಟು ಕೊಡಬೇಕೆಂಬುದನ್ನು ನಿರ್ಧರಿಸುತ್ತಾರೆ. ಆದರಂತೆ ಮಾಡುತ್ತಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಕೇಂದ್ರ ಸಿಲ್ಕ್ ಬೋರ್ಡಿನವರು ಈ ರೀತಿ ತರಿಸುವುದನ್ನು ಮೈಸೂರು ದೇಶದ ಖಾಸಗಿಯವರು ಎಷ್ಟು ತರಿಸುತ್ತಾರೆ ಎಂಬುದನ್ನ ಹೇಳುವುದಕ್ಕಾಗುವುದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಧ್ಯವಿದೆ. ಹೇಳಬಹುದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಅದನ್ನು ಗೊತ್ತು ಮಾಡಿಕೊಂಡು ಎಷ್ಟು ತರಿಸಿದರೆ ಸರಿಯಾಗಿರುತ್ತದೆ, ನಮ್ಮ ದೇಶದ ರೈತರಿಗೆ ತೊಂದರೆಯಾಗುವುದಿಲ್ಲವೆಂದು ನಿರ್ಧರ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಇದು ರೇಷ್ಮೆ ವ್ಯವಸಾಯಮಾಡತಕ್ಕವರ ಪ್ರಶ್ನೆಯೇ ಅಲ್ಲ. ಈ ಪ್ರಶ್ನೆ ಕೈಮಗ್ಗದವರಿಗೂ ಮಿಲ್ಲಿನವರಿಗೂ ಸೇರಿದೆ. ಅವರು artificial silk ತರಿಸಬೇಕು. ಇಲ್ಲದಿದ್ದರೆ ಆ ಕೈಗಾರಿಕೋದ್ಯಮಕ್ಕೆ ಸಾಕಷ್ಟು raw material ಸಿಕ್ಕುವುದಿಲ್ಲ. ಆದರೆ ವ್ಯವಸಾಯಗಾರರು ಹೇಳುತ್ತಾರೆ, import ಮಾಡಿದರೆ ಇಲ್ಲಿ ರೇಷ್ಮೆಯ ಬೆಲೆ ಬಿದ್ದು ಹೋಗುತ್ತದೆ ಎಂದು. ಆದ್ದರಿಂದ ವ್ಯವಸಾಯಗಾರರ ರಕ್ಷಣೆಯನ್ನು ಮಾಡಬೇಕು. ಆದ್ದರಿಂದ ಇಬ್ಬರ interestನ್ನೂ ನಾವು ನೋಡಬೇಕಾಗಿದೆ. ಇದನ್ನು ಸೆಂಟ್ರಲ್ ಸಿಲ್ಕ್‌ಬೋರ್ಡಿನವರು ಮಾಡಬೇಕು. Import ಮಾಡದೆ ಇದ್ದರೆ ಕೈಮಗ್ಗದವರೂ, ನೆಯ್ಗೆಯವರೂ ಗಲಾಟೆಮಾಡುತ್ತಾರೆ.

This is a question of two interests conflicting with each other and the Central Silk Board reconciling it.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸೆಂಟ್ರಲ್ ಸಿಲ್ಕ್ ಬೋರ್ಡಿನವರು ಒಟ್ಟು ಈ ಎರಡು ಭಾಗದಲ್ಲಿ ಕೆಲಸ ಮಾಡುವವರಿಗೂ ಸಾಮಾನ್ಯಯ ಮಾಡುವ ರೀತಿಯಲ್ಲಿ ಕೆಲಸ ಮಾಡುತ್ತಾರೆಂದು ಗೊತ್ತಿದೆ. ಆದರೆ ಮೈಸೂರು ದೇಶದ ಕೈ ಮಗ್ಗದವರಿಗೆ ಅವರ ಕನಬಿಗೆ ಎಷ್ಟು ಅವಶ್ಯಕವೋ ಅಷ್ಟು ತರಿಸದೆ ಹೆಚ್ಚು ತರಿಸುತ್ತಾರೆ. ಆದ್ದರಿಂದ ವ್ಯವಸಾಯಗಾರರ ಹಿತವನ್ನು ರಕ್ಷಣೆ ಮಾಡುವುದಕ್ಕೆ, ಈ ರೀತಿ ಎಷ್ಟುಬೇಕೋ ಅದಕ್ಕಿಂತ ಹೆಚ್ಚಿಗೆ ತರಿಸುತ್ತಾರೆಯೇ ಇಲ್ಲವೇ ಎಂಬುದನ್ನು ನೋಡಬೇಕಲ್ಲವೇ ?

Sri K. HANUMANTHAIYA.—It is not the primary responsibility of the Mysore Government. The Central Silk Board is constituted on All India basis ; the Mysore representatives are also there. It is for them to put forward this point of view before the Board and the Board to carry conviction to the Government of India. It is not so much within the purview or power of Mysore Government.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸೆಂಟ್ರಲ್ ಸಿಲ್ಕ್ ಬೋರ್ಡಿನಿಂದ ಯಾವ ಯಾವ ಸಂಸ್ಥಾನಕ್ಕೆ ಎಷ್ಟೆಷ್ಟು ಕೃತಕ ರೇಷ್ಮೆ ಹೋಗುತ್ತಿದೆಯೆಂಬುದನ್ನು ಸರ್ಕಾರದವರು ತರಿಸಬಹುದೇ ?

Sri K. HANUMANTHAIYA.—We can get facts and figures and place them on the Table of the House if necessary.

Sri K. S. VASAN.—Are the Government aware that almost all the twisting and weaving factories in Bangalore have decided to close down by 15th April ?

Sri K. HANUMANTHAIYA.—No.

Silk Industry in Hoskote Taluk.

Q.—594. Srimathi LAKSHMIDEVI RAMANNA (Hoskote-Anekal).—

Will the Government be pleased to state :—

(*a*) whether they are aware that silk industry is prospering in Hoskote Taluk ;

(*b*) whether they would take steps to open a Silk Filature Centre at Hoskote Taluk ?

A.—Sri A. G. RAMACHANDRA RAO (Minister for Law and Education) [on behalf of Sri H. SIDDAVEERAPPA (Minister for Home)].—

(*a*) Yes, Government are aware that sericulture is popular in the Taluk, the acreage under mulberry being about 2,000 acres.

(*b*) No.

ಶ್ರೀಮತಿ ಲಕ್ಷ್ಮಿದೇವಿ ರಾಮಣ್ಣ.—ಹೊಸಕೋಟೆ ತಾಲ್ಲೂಕಿನಲ್ಲಿ ರೇಷ್ಮೆ ವ್ಯವಸಾಯ ಜನಾನುರಾಗ ಪಡೆದಿದೆ ಎಂಬುದು ಸರ್ಕಾರದವರಿಗೆ ತಿಳಿದಿದೆ ಎಂದು ತಿಳಿಸಿದ್ದೀರಿ. ಜನಾನುರಾಗ ಪಡೆದಿರತಕ್ಕ ರೇಷ್ಮೆ ವ್ಯವಸಾಯಕ್ಕೆ ಸರ್ಕಾರದವರು ಪ್ರೋತ್ಸಾಹ ಕೊಡಲು ಕೈಕೊಂಡಿರುವ ಕಾರ್ಯಕ್ರಮಗಳು ಏನು ?

*ಶ್ರೀ ಎ. ಜಿ. ರಾಮಚಂದ್ರರಾವ್.—ಸೆಂಟ್ರಲ್ ಸಿಲ್ಕ್ ಬೋರ್ಡಿನವರು ಯಾವ ಯಾವ ಅನುಕೂಲಗಳನ್ನು ಕೊಡಬೇಕು ಎಂದು ಹೇಳಿದ್ದಾರೋ ಆ ಅನುಕೂಲಗಳನ್ನು ಏರ್ಪಡಿಸುವುದಕ್ಕೆ ತಯಾರು ಮಾಡುತ್ತಿದ್ದೇವೆ.